

ಮುಲ್ಲಾ ಪ್ರಥಮ ಬಾರಿಗೆ ವಿಮಾನ ಹತ್ತಿದ್ದ. ಅವನಿಗೆ ಒಂದೆಡೆ ಖುಷಿ, ಮತ್ತೊಂದೆಡೆ ತನ್ನದು ಇದೇ ಮೊದಲನೇ ವಿಮಾನಯಾನ ಎಂದು ಬೇರೆ ಪ್ರಯಾಣಿಕರಿಗೆಲ್ಲಿ ತಿಳಿದು ಬಿಡುತ್ತದೆಯೋ ಎಂಬ ಆತಂಕ.

ಸುಮಾರು ಹೊತ್ತು ಸುಮ್ಮನಿದ್ದ ನಂತರ ಪಕ್ಕದ ಪ್ರಯಾಣಿಕನಿಗೆ ಹೇಳಿದ, 'ನೋಡಿ ನಾವೆಷ್ಟು ಎತ್ತರದಲ್ಲಿ ಹಾರುತ್ತಿದ್ದೇವೆ. ಕೆಳಗಿರುವ ಜನರೆಲ್ಲಾ ಇರುವೆಗಳಂತೆ ಕಾಣುತ್ತಿದ್ದಾರೆ'.

ಸಹಪ್ರಯಾಣಿಕ ಹೇಳಿದ, 'ಅವೆಲ್ಲಾ ಇರುವೆಗಳೇ. ವಿಮಾನ ಇನ್ನೂ ಮೇಲೇರಿಯೇ ಇಲ್ಲ'!

★★★

ಜವಾಹರ ಲಾಲ್ ನೆಹರು ಒಮ್ಮೆ ಹುಚ್ಚಾಸ್ಪತ್ರೆಯ ಹೊಸ ಘಟಕದ ಉದ್ಘಾಟನೆಗೆ ಹೋಗಿದ್ದರು. ಅದೇ ದಿನ ಗುಣಹೊಂದಿದ ಕೆಲವರನ್ನು ಮನೆಗೆ ಕಳಿಸಲು ವೈದ್ಯರು ನಿರ್ಧರಿಸಿದ್ದರು. ನೆಹರು ಅಂತವನೊಬ್ಬನಿಗೆ ತನ್ನನ್ನು ಪರಿಚಯಿಸಿಕೊಳ್ಳುತ್ತಾ, ಹೇಳಿದರು, 'ನಾನು ಜವಾಹರ ಲಾಲ್ ನೆಹರು , ಭಾರತದ ಪ್ರಧಾನ ಮಂತ್ರಿ'.

ಆ ವ್ಯಕ್ತಿ ಹೇಳಿದ, 'ನಾನೂ ಬಂದಾಗ ಹೀಗೆ ಅಂದುಕೊಂಡಿದ್ದೆ. ಆದರೆ ಯೋಚನೆ ಮಾಡಬೇಡ. ಇಲ್ಲಿ ಒಳ್ಳೊಳ್ಳೆ ವೈದ್ಯರಿದ್ದಾರೆ. ನೀನು ಬೇಗನೆ ಗುಣ ಆಗ್ತೀಯಾ!'

★★★



ಏನಪ್ಪಾ ನೀನು ಕದ್ದಿರೋದನ್ನ ನೋಡಿರೋ ಇಬ್ಬರು ಸಾಕ್ಷಿಗಳಿದ್ದಾರೆ. ನಿನಗ್ಯಾಕೆ ಶಿಕ್ಷೆ ಕೊಡಬಾರದು? – ವಿಚಾರಣೆ ಮುಗಿಸುತ್ತಾ ನ್ಯಾಯಾಧೀಶರು ಆರೋಪಿಯನ್ನು ಪ್ರಶ್ನಿಸಿದರು.

ಆರೋಪಿ ಉತ್ತರಿಸಿದ– ಮಹಾಸ್ವಾಮಿ, ನಾನು ಕದ್ದಿರೋದನ್ನ ನೋಡದೇ ಇರೋ ನೂರು ಸಾಕ್ಷಿಗಳನ್ನು ನಾನು ಕೊಡಬಲ್ಲೆ. ಆದ್ರೆ ನೀವು ಒಪ್ತಾ ಇಲ್ವಲ್ಲಾ!

★★★

ಮುಲ್ಲಾ ನಸ್ರುದ್ದೀನನ ಹೆಂಡತಿ ತೀವ್ರ ಖಾಯಿಲೆಯಿಂದ ನರಳುತ್ತಿದ್ದಳು. ವೈದ್ಯರು ಅವನಿಗೆ ವಿಷಯವನ್ನು ತಿಳಿಸುತ್ತಾ ಹೇಳಿದರು, 'ನಿನ್ನ ಹೆಂಡತಿ ಬದುಕಿರುವುದು ಇನ್ನು ಕೆಲವೇ ದಿನ. ಧೈರ್ಯಗೆಡಬೇಡ, ಈ ಕಷ್ಟವನ್ನು ನೀನು ಸಹಿಸಿಕೊಳ್ಳಲೇಬೇಕು'.

ಮುಲ್ಲಾ ಹೇಳಿದ, 'ಪರವಾಗಿಲ್ಲ. ಇಷ್ಟು ವರ್ಷ ಅವಳೊಂದಿಗೆ ನಾನು ಏನೆಲ್ಲ ಕಷ್ಟಗಳನ್ನು ಸಹಿಸಿಕೊಂಡಿದ್ದೇನೆ. ಇನ್ನು ಕೆಲವೇ ದಿನ ಸಹಿಸಿಕೊಳ್ಳುವುದಕ್ಕೆ ತೊಂದರೆಯೇನಿಲ್ಲ!'

★★★

ಮುಲ್ಲಾ ಬಾರ್ ಒಂದರ ಮಾಲೀಕರಿಗೆ ಬೆಳಗಿನ ಜಾವಕ್ಕೆ ಫೋನ್ ಮಾಡಿ ಕೇಳಿದ, 'ಬಾರ್ ಎಷ್ಟು ಹೊತ್ತಿಗೆ ಬಾಗಿಲು ತೆಗೆಯುತ್ತದೆ?'

ಮಾಲೀಕ 'ನಾವು ಬೆಳಿಗ್ಗೆ ಹನ್ನೊಂದಕ್ಕೆ ಮುಂಚೆ ತೆಗೆಯುವುದಿಲ್ಲ. ನಮಗೆ ತೊಂದರೆ ಕೊಡಬೇಡಿ' ಎಂದು ಹೇಳಿ ಮುಲ್ಲಾನ ಉತ್ತರಕ್ಕೂ ಕಾಯದೆ ಫೋನನ್ನು ಕುಕ್ಕಿದ.

ಮುಲ್ಲಾ ಮತ್ತೆ ಹತ್ತು ನಿಮಿಷಕ್ಕೆ ಫೋನ್ ಮಾಡಿದ. ಮತ್ತೆ ಅದೇ ಪ್ರಶ್ನೋತ್ತರ. ಮೂರ್ನಾಲ್ಕು ಬಾರಿ ಇದು ಪುನರಾವರ್ತನೆಯಾದಾಗ ಮಾಲೀಕ ಸಹನೆ ಕಳೆದುಕೊಂಡು ಅರಚಿದ, 'ನಿಮಗೇನು ಬೇಕು, ನೀವೇಕೆ ತೊಂದರೆ ಕೊಡುತ್ತಿದ್ದೀರಿ?'

ಮುಲ್ಲಾ ಹೇಳಿದ, 'ನನಗೇನೂ ಬೇಡ ಸ್ವಾಮಿ, ನಿನ್ನೆ ರಾತ್ರಿ ನಾನು ಒಳಗಿದ್ದಾಗಲೇ ನೀವು ಬಾಗಿಲು ಹಾಕಿದ್ದೀರಿ. ನಾನೀಗ ಮನೆಗೆ ಹೋಗಬೇಕು!'

★★★

ಸಂತಾನಿಗೂ ಅವನ ಹೆಂಡತಿಗೂ ಎಲ್ಲಾ ವಿಷಯದಲ್ಲೂ ಭಿನ್ನಾಭಿಪ್ರಾಯ. ದಿನಾ ಜಗಳ ಆಡಿ ಬೇಸತ್ತ ಹೆಂಡತಿ ಕೊನೆಗೊಂದು ದಿನ ಹೇಳಿದಳು, 'ರೀ ನಾವು ವಿಚ್ಛೇದನ ಪಡೆಯೋಣ. ನಮ್ಮಿಬ್ಬರಲ್ಲಿ ಹೊಂದಾಣಿಕೆ ಆಗೋ ವಿಷಯ ಈ ಪ್ರಪಂಚದಲ್ಲಿ ಯಾವುದೂ ಇಲ್ಲ ಅನ್ಸುತ್ತೆ.



'ಒಂದು ವಿಷಯ ಇದೆ ಕಣೇ' ಸಂತಾ ಅದಕ್ಕೂ ತರಲೆ ತೆಗೆದ!

'ಹಾಗಾದ್ರೆ ಏನು ಹೇಳಿ?' ಹೆಂಡತಿ ಸವಾಲೆಸೆದಳು.

'ಅಪರಿಚಿತ ಊರೊಂದಕ್ಕೆ ಅರ್ಧರಾತ್ರಿಗೆ ತಲುಪಿದ್ದೇವೆ ಅಂತಿಟ್ಕೊ. ಹೋಟೆಲ್ ಎಲ್ಲೂ ಸಿಕ್ತಾ ಇಲ್ಲ. ಒಂದು ಕಡೆ ಎರಡು ರೂಮಿದೆ. ಒಂದರಲ್ಲಿ ಒಬ್ಬ ಹುಡುಗಿ, ಇನ್ನೊಂದರಲ್ಲಿ ಒಬ್ಬ ಹುಡುಗ ಇದ್ದಾರೆ. ಅವರು ರೂಮನ್ನು ಹಂಚಿಕೊಳ್ಳಲು ಒಪ್ಪಿದ್ದಾರೆ. ಈಗ ಹೇಳು ನೀನು ಯಾವ ರೂಮಿಗೆ ಹೋಗ್ತೀಯಾ?' ಸಂತಾ ಕೇಳಿದ

'ಅದರಲ್ಲಿ ಕೇಳೋದೇನಿದೆರೀ, ಹುಡುಗಿ ಇರೋ ರೂಮಲ್ಲಿ ಮಲಗ್ತೀನಿ' ಹೆಂಡತಿ ಹೇಳಿದಳು.

ಸಂತಾ ಖುಷಿಯಿಂದ ಕೂಗಿದ 'ಇಲ್ಲೇ ನೋಡು ನನಗೂ ನಿನಗೂ ಅಭಿಪ್ರಾಯ ಭೇದ ಇಲ್ದೇ ಇರೋದು!'

**–ವಸಂತ ನಡಹಳ್ಳಿ**